ಯಾಕೋ ತುಂಬಾ ಮನಾಟನಸ್ ಆಯಿತಲ್ಲವೇ? ಹಾಗಾದರೆ ಒಂದು ಸಣ್ಣ ಟ್ವಿಸ್ಟ್ ತೆಗೆದುಕೊಳ್ಳೋಣ. ಇತ್ತೀಚಿನ ಸಿನಿಮಾಗಳನ್ನು ನೋಡಿದೀರಷ್ಟೇ? ಯಾವ ಸಿನಿಮಾ ತೆಗೆದುಕೊಂಡರೂ ಸದ್ಯಕ್ಕೆ ಚಾಲ್ತಿಯಲ್ಲಿರುವ – ಮೋಸ್ಟ್ ವೈಡ್ಲೀ ಡಿಸ್ಕಸ್ಡ್ ಸಬ್ಜೆಕ್ಟ್‌ಗೇ ಬರೋಣ. ಚಿಕ್ಕ ಪ್ರಾಯದ ಹುಡುಗನಿಗೆ ಮಧ್ಯ ವಯಸ್ಕ ಮಹಿಳೆ ಮೇಲೆ ಪ್ರೇಮಾಂಕುರವಾಗುತ್ತೆ ಎಂಬುದನ್ನು ಕೊಂಚ ಬದಲಾಯಿಸಿ, ಮಧ್ಯ ವಯಸ್ಕ ಹೆಣ್ಣಿಗೆ ಈ ಚಿಕ್ಕ ಹುಡುಗನ ಮೇಲೆ ಒಂಥರಾ ಆಕರ್ಷಣೆಯೆಂದರೆ ಹೇಗೆ?

ಸರಿ, ಕಿವಿಗಳೆರಡನ್ನೂ ತೆರೆದು ಪುಂಖಾನುಪುಂಖವಾಗಿ ಹರಿಯುವ ಸುಳ್ಳಿಗೆ ರೆಡಿಯಾಗಿ.

ನಂಬರ್ ಒಂದು: ವಿಧವೆ. ಅವನಿಗಿಂತ ಐದು ವರುಷ ದೊಡ್ಡವಳಾದ ಅವಳು ಈಗಾಗಲೇ ಗಂಡನನ್ನು ಕಳೆದುಕೊಂಡಿದ್ದಾಳೆ. ಎರಡು ಮಕ್ಕಳನ್ನು ಪ್ರಯಾಸದಿಂದ ಸಾಕುತ್ತಿರುವ ಆಕೆಗೆ, ಮೊದಲ ಗಂಡನ ಗುಪ್ತ ಕಾಯಿಲೆ, ನೋವು, ನರಳಾಟಗಳಿಂದ ಜೀವನ ಸಾಕೆನ್ನಿಸಿದೆ. ಗಂಡ ಸತ್ತ ಶುರುವಿನಲ್ಲಿ 'ದೇವದಾಸ್', 'ಟೈಟಾನಿಕ್' ಅಂತಹ ಸಿನಿಮಾಗಳನ್ನು ಹಗಲೂ ರಾತ್ರಿ ವೀಕ್ಷಿಸಿ, ತನ್ನ ಖಾಲಿ ಬದುಕಿಗೆ ಫಿಲ್ಲರ್ ತರಹ ತುಂಬಿಸಿಕೊಂಡಿದ್ದಾಳೆ. ಮತ್ತು ಅಂತಹ ಸಿನಿಮಾಗಳು ಉಕ್ಕಿಸುವ ಕಣ್ಣೀರನ್ನು ಮುಕ್ತವಾಗಿ ಹರಿಬಿಟ್ಟು, ಮನೆಯ ಅಷ್ಟೂ ಗೋಡೆಗಳಿಗೆ ತೇವದ ಪಟ್ಟಿ ಬಳಿದಿದ್ದಾಳೆ. ಲಿಯೋನಾರ್ಡೋ ಡಿ ಕಾರ್ಪಿಯೋನ ಮೋಹಕ ಮುಖ ಹೃದಯ ಗೀರಿ ರಕ್ತ ಬಸಿದುಕೊಂಡರೆ, ಶಾರೂಕ್ ಖಾನ್‌ನ ತಪ್ತ ಹೃದಯಕ್ಕೆ ಮೌನ ರಾಗವಾಗುತ್ತಿದ್ದಾಳೆ.

ಈಗ ನಿಮಗೆ ಖಂಡಿತಾ ಸಿಟ್ಟು ಬರುತ್ತೆ. ಇಂತಹ ಪಾತ್ರವನ್ನು ಕತೆಯೊಳಗೆ ಎಳೆದು ತರುವ ಉದ್ದೇಶವೇನು? ಎಂದು ನಿಮ್ಮ ನಿಮ್ಮ ಮನೆಯಲ್ಲಿ ನೀವು ಮೇಜು ಕುಟ್ಟುತ್ತಿದ್ದೀರಿ. ವಿಧವೆಯೆಂದು ಎಷ್ಟು ನಿಷ್ಕಾರುಣವಾಗಿ ಬರೆದಿದ್ದಾರೆ, ಸ್ವಲ್ಪವೂ ಮಾನವೀಯತೆ ಇಲ್ವಾ ಎಂದು ನೀವು ಬೈಯುವುದು ಬೇಡವಾ? ಉಳಿದವರ ಗಮನಕ್ಕೆ ಕತೆ ಬರುವುದು ಬೇಡವಾ? ಇದೂ ಒಂಥರಾ ಟಿ.ಆರ್.ಪಿ. ಇದ್ದ ಹಾಗೆನೇ. ಕತೆಗೆ ಸೆಂಟಿಮೆಂಟ್, ಅಡಲ್ಟ್ ಥೀಮ್ ಇಲ್ಲದಿದ್ದರೆ ಓದುವವರು ಯಾರು?

ನಂಬರ್ ಟೂ: ಅವಳು ಕಾರ್ಯ ವಹಿಸುತ್ತಿರುವ ಕಾಲೇಜಿಗೆ ಇದೀಗ ಹೊಸದಾಗಿ ಬಂದಿರುವ ಅವಳ ಕಲೀಗ್, ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯ ಫ್ರೆಶ್ ಪ್ರಾಡಕ್ಟ್ ಅತ್ಯಂತ ಗಾಂಭೀರ್ಯದ ಎಳೇ ಅಧ್ಯಾಪಕ, ಸಪ್ಪಳವಾಗದಂತೆ ಅವಳ ಮುಚ್ಚಿದ ಹೃದಯದ ಕವಾಟಗಳ ನೆಟ್ ಮತ್ತು ಬೋಲ್ಟ್‌ಗಳನ್ನು ಸಡಿಲಗೊಳಿಸುತ್ತಿದ್ದಾನೆ. ಅವಳಿಗೀಗ ಬಾಗಿಲು ತೆರೆಯಲೇ, ಬೇಡವೇ ಎನ್ನುವ ದ್ವಂದ್ವ... ತನ್ನ ಹೃದಯದ ಬಡಿತವನ್ನು ಹೆಚ್ಚಿಸುತ್ತಿರುವವನೆದುರು ಎಂದಾದರೂ ಒಂದುದಿನ ಹೃದಯ ಬಸಿದು ಬೋಳಾಗಬೇಕೆನ್ನುವ ಹಪಾಹಪಿ, ತಲ್ಲಣ.

ಸಾಕು! ಸಾಕು! ಆದರೂ ಒಂದು ಮಾತು, ಪ್ರೀತಿಯೇನಾದರೂ ಕೇಳಿ ಬರುತ್ತದೆಯೇ? ಅನ್ನಿಸಿದವರ ಮುಂದೆಯೇ ಅನ್ನಿಸಿದ ಹಾಗೆ ಪ್ರೀತಿಯನ್ನು ನಿವೇದಿಸಿಕೊಳ್ಳುವ ಅವಕಾಶ ಎಲ್ಲರಿಗೂ ಬದುಕಿನಲ್ಲಿ ಒಮ್ಮೆಯಾದರೂ ಸಿಗುವ ಹಾಗಿದ್ದರೆ? ಮತ್ತು ಪ್ರತಿ ಪ್ರೀತಿಗೂ ಪ್ರತಿ ಸಂಚಲನ ಸಿಕ್ಕಿಬಿಟ್ಟರೆ...

ಓಹ್, ಭಾವುಕರಾದಿರಾ? ಇರಲಿ. ಆದರೆ, ಈ ವಿಷಯ ಲಿಯೋನಾರ್ಡೋ ಡಿ ಕಾರ್ಪಿಯೋ ಇರಲಿ, ಶಾರೂಕ್ ಖಾನ್ ಇರಲೀ, ಆ ಪಾಪದ ಅಧ್ಯಾಪಕನಿಗೂ ತಿಳಿದಿಲ್ಲ ಪಾಪ. ಆದರೆ, ಅದೇ ಕಾಲೇಜಿನಲ್ಲಿ ತನ್ನನ್ನು ತಾನೇ ಹೃತಿಕ್ ರೋಷನ್ ಎಂದು ಭಾವಿಸಿ ಓಡಿಯಾಡುತ್ತಿರುವ ಒಬ್ಬ ಹುಡುಗನಿದ್ದಾನೆ. ಅನುಷ್ಕಾ ಶರ್ಮ ಮತ್ತು ವಿರಾಟ್ ಕೊಹ್ಲಿಯ ಬ್ರೇಕ್ ಅಪ್‌ನ ಅತ್ಯಂತ